ಆ) ಮತ್ತು ಇ) ದಿನಾಂಕ: 1.6.87ರ ನಂತರ ಪ್ರಾರಂಭವಾದ ಎಲ್ಲಾ ಶಾಲೆಗಳು ಶಾಶ್ವತ ಅನುದಾನ ರಹಿತ ಶಾಲೆಗಳಾಗಿದ್ದು, ಅನುದಾನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕಳ್ಳಂಬೆಳ್ಳ ಕ್ಷೇತ್ರದ ಹುಳಿಯಾರು ಪ್ರಥಮ ದರ್ಜೆ ಕಾಲೇಜಿಗೆ ಉಪನ್ಯಾಸಕರನ್ನು ನಿಯೋಜಿಸುವುದು

2884 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳ್ಳಂಬೆಳ್ಳ ಕ್ಷೇತ್ರದ ಹುಳಿಯಾರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು 1992-93ರಲ್ಲಿ ಮಂಜೂರಾಗಿ ವಿದ್ಯಾರ್ಥಿಗಳ ಸಂಖ್ಯೆಯು ಗಣನೀಯ ಏರಿಕೆ ಪ್ರಮಾಣದಲ್ಲಿದ್ದರೂ ಅಗತ್ಯ ಉಪನ್ಯಾಸಕರು ಮತ್ತು ಸಿಬ್ಬಂದಿ ಇಲ್ಲದೆ ಪಾಠಪ್ರವಚನಕ್ಕೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಬಗ್ಗೆ ತತ್‌ಕ್ಷಣ ಅಗತ್ಯ ಉಪನ್ಯಾಸಕರು ಹಾಗೂ ಸಿಬ್ಬಂದಿಗಳನ್ನು ಸದರಿ ಕಾಲೇಜಿಗೆ ವರ್ಗಾಯಿಸಲು ಕ್ರಮ ಕೈಗೊಳ್ಳುವಿರಾ? ಈ ಬಗ್ಗೆ ಸರ್ಕಾರದ ನಿಲುವೇನು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಶಿಕ್ಷಣ ಸಚಿವರು) :

ಅ) ಹೌದು, ಅರ್ಥಶಾಸ್ತ್ರ ಮತ್ತು ಆಂಗ್ಲ ಭಾಷೆಗಳಲ್ಲಿ ಮಾತ್ರ ಉಪನ್ಯಾಸಕರ ಕೊರತೆ ಇದೆ.

ಆ) ಹೌದು, ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಗ್ರಂಥಾಲಯಗಳು

2885- ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಗ್ರಂಥಾಲಯಗಳ ಒಟ್ಟು ಸಂಖ್ಯೆ ಎಷ್ಟು; ಯಾವ ಯಾವ ಭಾಗದಲ್ಲಿ ಇವೆ?*

ಆ) *ಬೆಳೆಯುತ್ತಿರುವ ಮಹಾನಗರ ಮತ್ತು ಓದುಗರ ಸಂಖ್ಯೆ ಹೆಚ್ಚಳದಿಂದ ಮಹಾನಗರಕ್ಕೆ ಇನ್ನೂ ಹೆಚ್ಚಿನ ಗ್ರಂಥಾಲಯಗಳು ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಇನ್ನು ಎಷ್ಟು ಮತ್ತು ಯಾವ ಭಾಗಗಳಲ್ಲಿ ಹೆಚ್ಚಿನ ಗ್ರಂಥಾಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ?*

ಈ) *ಈ ಗ್ರಂಥಾಲಯಗಳನ್ನು ವಿಸ್ತರಿಸಲು ತಗಲುವ ವೆಚ್ಚ ಎಷ್ಟು?*

ಉ) *ಈ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) 34 (ಪಟ್ಟಿ ಲಗತ್ತಿಸಿದೆ).

ಆ) ಬಂದಿದೆ.

ಇ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಒಟ್ಟು 67 ವಾರ್ಡ್‌ಗಳಿದ್ದು, ಅದರಲ್ಲಿ 34 ವಾರ್ಡ್‌ಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ. ಇನ್ನುಳಿದ ವಾರ್ಡ್‌ಗಳಲ್ಲಿ ಹಂತ ಹಂತವಾಗಿ ಗ್ರಂಥಾಲಯಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಈ) ಪ್ರತಿ ಗ್ರಂಥಾಲಯಕ್ಕೆ ಅಂದಾಜು ರೂ. 3.00 ಲಕ್ಷಗಳು.

ಉ) ಜನ ಸಾಮಾನ್ಯರಿಗೆ ಹೆಚ್ಚಿನ ಗ್ರಂಥಾಲಯ ಸೇವೆಯನ್ನು ಒದಗಿಸುವ ದೃಷ್ಟಿಯಿಂದ 1997-98ನೇ ಸಾಲಿನಲ್ಲಿ ರಾಜ್ಯದ ಮಹಾನಗರಗಳಲ್ಲಿ ಹೊಸದಾಗಿ 15 ಶಾಖಾ ಗ್ರಂಥಾಲಯಗಳನ್ನು ಪ್ರಾರಂಭಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಅದರಲ್ಲಿ ಹುಬ್ಬಳ್ಳಿ-ಧಾರವಾಡದಲ್ಲಿ 1 ಶಾಖಾ ಗ್ರಂಥಾಲಯವನ್ನು ಪ್ರಾರಂಭಿಸಲಾಗುವುದು.

ನಗರ ಕೇಂದ್ರ ಗ್ರಂಥಾಲಯ, ಧಾರವಾಡ

1) ಮುಖ್ಯ ಗ್ರಂಥಾಲಯಾಧಿಕಾರಿಗಳರವರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಡಿ.ಸಿ. ಕಂಪೌಂಡ್, ಹುಬ್ಬಳ್ಳಿ-ಧಾರವಾಡ ಧಾರವಾಡ-580 001.

2) ಸಂಚಾರಿ ಗ್ರಂಥಾಲಯ, ನಗರ ಕೇಂದ್ರ ಗ್ರಂಥಾಲಯ, ಡಿ.ಸಿ. ಕಂಪೌಂಡ್, ಧಾರವಾಡ 580 001.

3) ನಗರ ಕೇಂದ್ರ ಗ್ರಂಥಾಲಯ, ಶಾಖ ಗರಗ ಸಿದ್ದಲಿಂಗಪ್ಪ ಕಟ್ಟಡ ವಾಚನಾಲಯ, ಸೆಂಟ್ರಲ್ ಬಸ್‌ಸ್ಟ್ಯಾಂಡ್ ಹತ್ತಿರ, ಸುಭಾಷ್ ರೋಡ್, ಧಾರವಾಡ - 580 001.

4) ನಗರ ಕೇಂದ್ರ ಗ್ರಂಥಾಲಯ ಶಾಖೆ, ವಿವೇಕನಂದ ನಗರ, ನೀಲಶ್ರೀ ಕಟ್ಟಡ ವಿದ್ಯಾಗಿರಿ ಹತ್ತಿರ, ಧಾರವಾಡ -580 006.

5) ನಗರ ಕೇಂದ್ರ ಗ್ರಂಥಾಲಯ ಶಾಖೆ ಮೂರುಸಾವಿರ ಮಠ, ಮೃತ್ಯುಂಜಯನಗರ, ಧಾರವಾಡ -580 006.

6) ನಗರ ಕೇಂದ್ರ ಗ್ರಂಥಾಲಯ, ವಿ.ಬಿ. ದಾಸ್ತಿಕೊಪ್ಪ ಕಟ್ಟಡ, ಬ್ಯಾಂಕ್ ಆಫ್ ಬರೋಡ ಹತ್ತಿರ, ನಾರಾಯಣಪುರ ಧಾರವಾಡ - 580 008.

7) ನಗರ ಕೇಂದ್ರ ಗ್ರಂಥಾ ಶಾಖೆ, ಸುಳ್ಯದಸುತ ಬಿಲ್ಡಿಂಗ್ ಸಪ್ತಾಪೂರ ಧಾರವಾಡ - 580 001.

8) ನಗರ ಕೇಂದ್ರ ಗ್ರಂಥಾಲಯ ಶಾಖೆ, ಶುಕ್ರವಾರ ಪೇಠೆ ಕುರುಬರ ಓಣಿ, ಧಾರವಾಡ - 580 001.

9) ನಗರ ಕೇಂದ್ರ ಗ್ರಂಥಾಲಯ ಶಾಖೆ ಮಾನಸಿಕ ಆಸ್ಪತ್ರೆ, ಬೆಳಗಾಂ ರಸ್ತೆ, ಧಾರವಾಡ 580 008.

10) ನಗರ ಕೇಂದ್ರ ಗ್ರಂಥಾಲಯ ಶಾಖೆ, ಸಿವಿಲ್ ಆಸ್ಪತ್ರೆ, ಧಾರವಾಡ - 580 008.

11) ಬಾಲಾಪರಾಧಿ ಗೃಹ ಸೇವಾ ಕೇಂದ್ರ ಗ್ರಂಥಾಲಯ, ಧಾರವಾಡ - 580 008.

12) ಗಾಂಧಿಪ್ರತಿಷ್ಠಾನ ಸೇವಾ ಕೇಂದ್ರ ಗ್ರಾಂಥಾಲಯ, ಹೋಟೆಲ್ ಧಾರವಾಡ ಹತ್ತಿರ, ಧಾರವಾಡ 580 001.

13) ಸೇವಾ ಕೇಂದ್ರ ಗ್ರಂಥಾಲಯ, ಜಿಲ್ಲಾ ಪೋಲೀಸ್ ಹೆಡ್ ಕ್ವಾಟರ್ಸ್ ಧಾರವಾಡ - 580 008.

14) ನಗರ ಕೇಂದ್ರ ಗ್ರಂಥಾಲಯ ಶಾಖೆ ಮೂರುಸಾವಿರ ಮಠ, ಹುಬ್ಬಳ್ಳಿ.

15) ನಗರ ಕೇಂದ್ರ ಗ್ರಂಥಾಲಯ ಶಾಖೆ ಇಂದಿರಾ ಗಾಜಿನ ಮನೆ ಆವರಣ, ಮಹಾತ್ಮ ಗಾಂಧಿ ಉದ್ಯಾನವನ ಪಿ.ಬಿ. ರೋಡ್, ಹುಬ್ಬಳ್ಳಿ - 20

16) ನಗರ ಕೇಂದ್ರ ಗ್ರಂಥಾಲಯ ಶಾಖೆ, ಹಳೇಹುಬ್ಬಳ್ಳಿ, ವೀರಭದ್ರಸ್ವಾಮಿ, ದೇವಸ್ಥಾನ ಹತ್ತಿರ, ಹುಬ್ಬಳ್ಳಿ - 24

17) ನಗರ ಕೇಂದ್ರ ಗ್ರಂಥಾಲಯ ಶಾಖೆ, ರೇಲ್ವೆ ಕಾಲನಿ ವಿನೋಭಾನಗರ ಹುಬ್ಬಳ್ಳಿ-580 020.

18) ನಗರ ಕೇಂದ್ರ ಗ್ರಂಥಾಲಯ ಶಾಖೆ, ಫೆಂಟಿಕೇರಿ ವ್ಯಾಯಾಮ ಶಾಲೆ. ಬಿಲ್ಡಿಂಗ್ ಮಂಗಳವಾರ ಪೇಠ, ಹುಬ್ಬಳ್ಳಿ - 580 028

19) ನಗರ ಕೇಂದ್ರ ಗ್ರಂಥಾಲಯ ಶಾಖೆ, ಕೆ.ಎಂ.ಸಿ.ಬಿ.ಪಿ.ಡಿ. ಕಾಂಪ್ಲೆಕ್ಸ್, ಹುಬ್ಬಳ್ಳಿ - 580 023.

20) ನಗರ ಕೇಂದ್ರ ಗ್ರಂಥಾಲಯ ಶಾಖೆ, ಕೋ ಆಪರೇಟಿವ್ ಆಸ್ಪತ್ರೆ ಕಟ್ಟಡ ಹುಬ್ಬಳ್ಳಿ - 580 020.

21) ನಗರ ಕೇಂದ್ರ ಗ್ರಂಥಾಲಯ, ಉಣಕಲ್, ಸ್ವಾಮಿ ವಿವೇಕಾನಂದ ಯುವಕ ಮಂಡಳ, ಉಣಕಲ್ - 580 031.

22) ನಗರ ಕೇಂದ್ರ ಗ್ರಂಥಾಲಯ ಶಾಖೆ, ಕ್ಯಾನ್ಸರ್ ಆಸ್ಪತ್ರೆ, ನವನಗರ, ಹುಬ್ಬಳ್ಳಿ - 25.

23) ನಗರ ಕೇಂದ್ರ ಗ್ರಂಥಾಲಯ ಶಾಖೆ, ಭೈರಿದೇವಕೊಪ್ಪ, ಪಿ.ಬಿ. ರೋಡ್ ಹುಬ್ಬಳ್ಳಿ - 580 025.

24) ನಗರ ಕೇಂದ್ರ ಗ್ರಂಥಾಲಯ ಶಾಖೆ, ನಾಗಶೆಟ್ಟಿಕೊಪ್ಪ ಕೇಶ್ವಪೂರ, ಹುಬ್ಬಳ್ಳಿ - 23

25) ಸೇವಾ ಕೇಂದ್ರ ಗ್ರಂಥಾಲಯ, ಉಪಕಾರಾಗೃಹ ಸಬ್ ಜೇಲ್, ಹುಬ್ಬಳ್ಳಿ.

26) ಸೇವಾ ಕೇಂದ್ರ ಗ್ರಂಥಾಲಯ, ಸುತಗಟ್ಟಿ, ನವನಗರ, ಹುಬ್ಬಳ್ಳಿ - 25

27) ಸೇವಾ ಕೇಂದ್ರ ಗ್ರಂಥಾಲಯ, ಅನುಗೋಳ್, ಹುಬ್ಬಳ್ಳಿ - 580 025.

28) ಸೇವಾ ಕೇಂದ್ರ ಗ್ರಂಥಾಲಯ, ರಾಯಪೂರ, ನವನಗರ, ಹುಬ್ಬಳ್ಳಿ - 580 025.